**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 29−10−2025**
**ಮುಂದುವರೆದ ಪಾಟೀ ಸವಾಲುಃ ವಾದಿಯರ ಪರ ಶ್ರೀ. ಎಸ ಕೆ ಎನ್ ವಕೀಲರಿಂದಃ**

4. ಈ ದಾವೆಯಲ್ಲಿ ನಾನು ದಾಖಲೆಗಳನ್ನು ಹಾಜರಮಾಡಿರುತ್ತೇನೆ. ನಾನು ಏನು ದಾಖಲೆಗಳನ್ನು ಹಾಜರಮಾಡಿದ್ದೆನೆ ಎಂದು ಹೇಳಲು ಬರುವುದಿಲ್ಲ. ಎಮ್ ಇ ನಂ.47 ಇದರ ಬಗ್ಗೆ ನನಗೆ ಗೊತ್ತು. ಎಮ್ ಇ ನಂ.47ಕ್ಕೆ ಸಂಬಂದಿಸಿದಂತೆ ನಾನು ದಾಖಲೆಗಳನ್ನು ಹಾಜರ ಮಾಡಿಲ್ಲ. ಯಾರ ಅರ್ಜಿ ಆಧಾರದ ಮೇಲೆ ಎಮ್ ಇ ನಂ.47 ತಯಾರು ಮಾಡಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಯಾರು ಅರ್ಜಿ ಕೊಟ್ಟಿದ್ದಾರೆ ಯಾವಾಗ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಮ್ ಇ ನಂ.47ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರ ಮಾಡಲು ನನಗೆ ಅಡಚಣೆ ಇಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರ ಮಾಡುತ್ತೇನೆ. ಎಮ್ ಇ ನಂ.47ನೆದ್ದನ್ನು ನಾನು ನೋಡಿದ್ದೆನೆ. ಈಗ ಸಾಕ್ಷಿಗೆ ನಿಪಿ.36 ನೆದ್ದನ್ನು ತೋರಿಸಲಾಗಿ ಅದರಲ್ಲಿ ಬೇರೆ ಬೇರೆ ವ್ಯಕ್ತಿಗಳು ಬರೆದಿದ್ದಾರೆ ಎಂದು ಲಿಪಿಯಲ್ಲಿ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿಪಿ.36ನೇದ್ದರಲ್ಲಿ 6 ಸಾಲುಗಳು ದಪ್ಪ ಅಕ್ಷರಗಳಲ್ಲಿ ಇವೆ ಮತ್ತು ಎರಡು ಸಾಲುಗಳು ಸಣ್ಣ ಅಕ್ಷರಗಳಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ.36ರಲ್ಲಿ ಬರೆದ ವಿಷಯಗಳು ನನಗೆ ಸ್ಪಷ್ಟವಾಗಿ ಕಾಣುವುದಿಲ್ಲ. ಹಾಗು ನಿಪಿ.36 ರಲ್ಲಿ ಸಹಿಗಳು ಎಲ್ಲಿ ಮಾಡಲಾಗಿದೆ ಮತ್ತು ಅದರ ಮೇಲೆ ಏನು ಬರೆಯಲಾಗಿದೆ ಎಂದು ನನಗೆ ಕಾಣುವುದಿಲ್ಲ. ನಿಪಿ.36ನೇದ್ದರಲ್ಲಿ ಸರ್ವೆ ನಂ.4, ಸರ್ವೆ ನಂ.10 ಮತ್ತು 11 ರ ಬಗ್ಗೆ ಉಲ್ಲೇಖವಿದೆ. ಇವುಗಳನ್ನು ಬಿಟ್ಟು ಬೇರೆ ಸರ್ವೆ ನಂಬರ ನಮೂದು ಇರುವುದಿಲ್ಲ. ಯಾವ ಉದ್ದೇಶಕ್ಕೆ ಎಮ್ ಇ ನಂ.47 ನ್ನು ತಯಾರಿಸಲಾಗಿದೆ ಎಂದರೆ ಸಾಕ್ಷಿಯು ನೇಯಾ ಬಿಕು ಗೌಡಾ ಇವರಿಗೆ ಸರ್ವೆ ನಂ.4, 10 ಮತ್ತು 11 ಸರ್ಕಾರ ಕಡೆಯಿಂದ ಮಂಜೂರಿಯಾಗಿದೆ ಎನ್ನುತ್ತಾರೆ. ಎಮ್ ಇ ನಂ.47 ಇದನ್ನು 1955 ರಲ್ಲಿ ತಯಾರು ಮಾಡಲಾಗಿದೆ. ಸಾಕ್ಷಿ ಮುಂದುವರೆದು ಅದರ ಪ್ರಕಾರ ಮೂರು ಜನರ ಹೆಸರುಗಳನ್ನು ದಾಖಲು ಮಾಡಲಾಗಿದೆ ಎನ್ನುತ್ತಾರೆ. ಎಮ್ ಇ ನಂ.47 ರ ಪ್ರಕಾರ ನಾರಾಯಣ, ಲಕ್ಷ್ಮಣ ಮತ್ತು ಅರ್ಜುನ ಇವರು ಮಾಲೀಕರು ಆಗಿರುತ್ತಾರೆ. ಎಮ್ ಇ ನಂ.47 ತಯಾರು ಆದ ನಂತರ ಈ ಮೇಲೆ ಹೇಳಿದ ಮೂರು ಜನರಿಗೆ ಹಕ್ಕು ಬಂದಿರುತ್ತದೆ. ಬೇರೆಯವರ ಹಕ್ಕನ್ನು ಮೊಟಕುಗೊಳಿಸಬೇಕೆಂದು ಎಮ್ ಇ ನಂ.47 ನೇದ್ದನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ.

5. 1955 ರಲ್ಲಿ ನಿನ್ನ ವಯಸ್ಸು ಎಷ್ಟು ಇತ್ತು ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಿಪಿ.36 ನೇದ್ದರಲ್ಲಿ ಸರ್ವೆ ನಂ.12/19, 19, 43/5, 2/2, 3/1, 3/2, 4, 8, 10, 5, 11, 43/1, 12/1 ನೇದ್ದವುಗಳನ್ನು ನಮೂದಿಸಲಾಗಿದೆ ಎಂದರೆ ಸರಿ. ಎಮ್ ಇ ನಂ.47 ನೇದ್ದನ್ನು ನೇಯಾ ಬಿಕಾ ಗೌಡಾ ಇವರು ಮರಣ ಹೊಂದಿದ್ದರಿಂದ ತಯಾರು ಮಾಡಲಾಗಿದೆ ಎಂದರೆ ಸರಿ. ನೇಯಾ ಬಿಕಾ ಗೌಡಾ ಇವರು ದಾವಾ ಆಸ್ತಿಗಳ ಜಂಟಿ ಕಬ್ಜೆದಾರರು ಇದ್ದರು ಎಂದರೆ ಸರಿಯಲ್ಲ. ನೇಯಾ ಬಿಕಾ ಗೌಡಾ ಇವರು ಮೂರು ಜಮೀನುಗಳಿಗೆ ಮಾತ್ರ ಮಾಲೀಕರು ಆಗಿದ್ದರು. ಮತ್ತು ಉಳಿದ ಜಮೀನುಗಳಿಗೆ ಸಹ ಸಂಬಂಧವನ್ನು ಹೊಂದಿದ್ದರು. ಬಾಕಿ ಎಲ್ಲಾ ಜಮೀನುಗಳಿಗೆ ಅವರು ಏಕತ್ರ ಕುಟುಂಬದ ನಾತೆಯಿಂದ ಸಂಬಂಧವನ್ನು ಹೊಂದಿದ್ದರು. ಎಮ್ ಇ ನಂ.47 ಇದು 13 ಜಮೀನುಗಳಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಮೂರು ಜಮೀನುಗಳಿಗೆ ಮಾತ್ರ ಡೈರಿಯನ್ನು ತಯಾರು ಮಾಡಲಾಗಿದೆ ಎನ್ನುತ್ತಾರೆ. ಎಮ್ ಇ ನಂ.47ನೆದ್ದನ್ನು ತಯಾರು ಮಾಡಲಾದ ನಂತರ ಮೂರು ಜಮೀನುಗಳಲ್ಲಿ ಹೆಸರನ್ನು ದಾಖಲಾಯಿತು. ಅವುಗಳ ಸರ್ವೆ ನಂ.4, 10 ಮತ್ತು 11. ಬೇರೆ ಸರ್ವೆ ನಂಬರಗಳ ಬಗ್ಗೆ ಸದರಿ ಎಮ್ ಇ ನಂ.47 ಅಮಲ್ಜಾರಿಯಾಗಿಲ್ಲ. ಎಮ್ ಇ ನಂ.47 ರಲ್ಲಿ ಬರೆದ ವಿಷಯಗಳು ಕಣ್ಣಿಗೆ ಕಾಣುತ್ತಿದ್ದರು ಕೂಡಾ ಕಾಣುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

6. ನಿಪಿ.36 ನೇದ್ದರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ವಿಷಯವನ್ನು ಬರೆದ ನಂತರ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ಕಣ್ಣಿಗೆ ಕಾಣುತ್ತಿಲ್ಲ ಎನ್ನುತ್ತಾರೆ. ವಿಷಯ ಬರೆದ ನಂತರ ಸಹಿಯನ್ನು ಮಾಡುತ್ತಾರೆ. ಸಹಿ ಮಾಡಿದ ನಂತರ ಎಲ್ಲ ವಿಷಯ ಮುಗಿದುಹೋಗಿರುತ್ತದೆ. ನಿಪಿ.36 ರಲ್ಲಿ ಸಹಿ ಮಾಡಿದ ನಂತರವು ವಿಷಯವನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಎಮ್ ಇ ನಂ.47 ನೆದ್ದನ್ನು ನಾವು ಖೊಟ್ಟಿಯಾಗಿ ತಯಾರು ಮಾಡಿದ್ದೆವೆ ಎಂದರೆ ಸರಿಯಲ್ಲ. ಎಮ್ ಇ ನಂ.47 ಖೊಟ್ಟಿ ತಯಾರು ಮಾಡಿದ್ದರಿಂದ ಅದು ಗೊತ್ತಾಗುತ್ತದೆ ಎಂದು ತಿಳಿದು ಅದಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ದಾಖಲೆಗಳನ್ನು ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ಗ್ರಾಮ ಲೆಕ್ಕಾಧಿಕಾರಿ ಇವರು ಸಹಿ ಮಾಡಿದ ನಂತರ ಅಂದರೆ ದಾಖಲ ಎನ್ನುವ ಶಬ್ದ ಬರೆದ ನಂತರ ಉಳಿದ

ಅಕ್ಷರಗಳು ಸೇರ್ಪಡಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ.36 ಖೊಟ್ಟಿ ದಾಖಲೆ ತಯಾರು ಮಾಡಿದ ನಂತರ ಸರ್ವೆ ನಂ.4, 10 ಮತ್ತು 11 ನೇದ್ದರಲ್ಲಿ ವಾದಿಯವರಿಗೆ ಹಿಸ್ಸೆ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಿಪಿ.36ಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಹಾಜರ ಮಾಡುವುದಿಲ್ಲ.

**ಮುಂದಿನ ಪಾಟೀ ಸವಾಲಗಾಗಿ ವಕೀಲರು ಸಮಯಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**